**ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಡ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಶಿಕ್ಷಕರ ಮಾಹಿತಿ ನಮೂನೆಯಲ್ಲಿ ಭರ್ತಿ ಮಾಡಲು ಅನುಸರಿಸಬೇಕಾದ ಸೂಚನೆಗಳು**

- **ಕೆ.ಜಿ.ಐ.ಡಿ ಸಂಖ್ಯೆ**– ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರು ನಿಮ್ಮ ಪ್ರಥಮ ಕೆ.ಜಿ.ಐ.ಡಿ ಸಂಖ್ಯೆಯನ್ನು ನಮೂದಿಸುವುದು.( ಹೆಚ್ ಆರ್ ಎಂ ಎಸ್ ನಲ್ಲಿದ್ದಂತೆ)
- **ಎಲ್ ಐ ಸಿ ಸಂಖ್ಯೆ– ಅನುದಾನಿತ** ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರು ನಿಮ್ಮ ಎಲ್ ಐ ಸಿ ಸಂಖ್ಯೆ ನಮೂದಿಸುವುದು
- **ಹೆಸರು**– ಶಿಕ್ಷಕರು ಹೆಸರನ್ನು ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯುವುದು.
- **ಮಹಿಳೆ ಪುರುಷ** –ಬಾಕ್ಸ್ ನ ಮುಂದೆ √ ಮಾಡುವುದು.
- **ಹುಟ್ಟಿದ ದಿನಾಂಕ**– dd/mm/yyyy ಮಾದರಿಯಲ್ಲಿ ಹುಟ್ಟಿದ ದಿನಾಂಕವನ್ನು ನಮೂದಿಸಬೇಕು.
- **ಪ್ರಸ್ತುತ ಧಾರಣೆ ಮಾಡಿರುವ ವೃಂದ**- ಅನುಬಂಧದಿಂದ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವ ವೃಂದವನ್ನು ಆಯ್ಕೆ ಮಾಡಿ, ಆ ವೃಂದದ ಸಂಕೇತವನ್ನು ಬಾಕ್ಸ್ ಗಳಲ್ಲಿ ಬರೆಯುವುದು.
- **ಹುದ್ದೆಯ ವಿಷಯ**– ಶಿಕ್ಷಕರು ತಾವು ನೇಮಕಗೊಂಡಿರುವ ಹುದ್ದೆಯ ವಿಷಯದ ಸಂಕೇತವನ್ನು ಅನುಬಂಧದಿಂದ ಆಯ್ಕೆ ಮಾಡಿ ಬಾಕ್ಸ್ ಗಳಲ್ಲಿ ತುಂಬಿಸುವುದು.
- **ಅನುದಾನಿತ ಪ್ರೌಢಶಾಲೆಯ** ಶಿಕ್ಷಕರು ಎನ್ ಪಿ ಎಸ್/ಪ್ರಾನ್ ಸಂಖ್ಯೆಯನ್ನು ಭರ್ತಿ ಮಾಡುವುದು.
- **ಬೋಧನಾ ಮಾಧ್ಯಮ**– ಶಿಕ್ಷಕರು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಬೋಧಿಸುತ್ತಿರುವ ಮಾಧ್ಯಮದ ಸಂಕೇತವನ್ನು ಅನುಬಂಧದಿಂದ ಆಯ್ಕೆ ಮಾಡಿ ಬಾಕ್ಸ್ ಗಳಲ್ಲಿ ಭರ್ತಿ ಮಾಡುವುದು.
- **ವೇತನ ಶ್ರೇಣಿ**– ಅನುಬಂಧದಲ್ಲಿರುವ ವೇತನ ಶ್ರೇಣಿಯ ಸಂಕೇತವನ್ನು ಆಯ್ಕೆ ಮಾಡಿ ಬಾಕ್ಸ್ ಗಳಲ್ಲಿ ನಮೂದಿಸುವುದು.
- **ಆಧಾರ್ ಸಂಖ್ಯೆ** ಮತ್ತು **ಮೊಬೈಲ್ ಸಂಖ್ಯೆ**ಗಳನ್ನು ಕಡ್ಡಾಯವಾಗಿ ಭರ್ತಿಮಾಡುವುದು.
- **ಅನುದಾನಿತ ಪ್ರೌಢಶಾಲೆಯ** ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವ ಶಾಲೆಯ ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸವನ್ನು ಬರೆಯುವುದು.
- **ಶಾಲೆಯ ಹೆಸರನ್ನು** ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯುವುದು ಮತ್ತು ಶಾಲೆಯ **ಡೈಸ್ ಸಂಖ್ಯೆಯನ್ನು** ನಮೂನೆಯಲ್ಲಿ ನೀಡಿರುವ ನಿಗಧಿತ ಬಾಕ್ಸ್‌ಗಳಲ್ಲಿ (11) ಭರ್ತಿ ಮಾಡುವುದು.
- **ಶಾಲೆಯು** ಇರುವ **ತಾಲ್ಲೂಕು** ಮತ್ತು **ಜಿಲ್ಲೆಯ** ಹೆಸರನ್ನು ಬರೆಯುವುದು.
- **ಶಿಕ್ಷಕರು** ಸೇವೆಗೆ ಸೇರಿದ ದಿನಾಂಕವನ್ನು dd/mm/yyyy ಮಾದರಿಯಲ್ಲಿ ಭರ್ತಿ ಮಾಡುವುದು.
- **ಅನುದಾನಿತ ಶಾಲೆಯ** ಶಿಕ್ಷಕರು ವೇತನಾನುದಾನಕ್ಕೆ ಒಳಪಟ್ಟ ದಿನಾಂಕವನ್ನು dd/mm/yyyy ಮಾದರಿಯಲ್ಲಿ ಭರ್ತಿ ಮಾಡುವುದು.
- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಕರು **ಜೂನ್ 2007** ರಿಂದ ತಾವು ಕಾರ್ಯ ನಿರ್ವಹಿಸಿದ ಶಾಲೆಯ ವಲಯ, ಆ ಶಾಲೆಯ ಡೈಸ್ ಕೋಡ್, ಕಾರ್ಯ ನಿರ್ವಹಿಸಿದ ಅವಧಿ ಯನ್ನು (dd/mm/yyyy) ಆಯಾ ಬಾಕ್ಸ್‌ಗಳಲ್ಲಿ ನಮೂದಿಸುವುದು.
- **ಅನುದಾನಿತ ಶಾಲೆಯ** ಶಿಕ್ಷಕರು ವೇತನಾನುದಾನಕ್ಕೆ ಒಳಪಟ್ಟ ದಿನಾಂಕದಿಂದ ತಾವು ಕಾರ್ಯ ನಿರ್ವಹಿಸಿದ ಶಾಲೆಯ ವಲಯ, ಆ ಶಾಲೆಯ ಡೈಸ್ ಕೋಡ್, ಕಾರ್ಯ ನಿರ್ವಹಿಸಿದ ಅವಧಿ ಯನ್ನು (dd/mm/yyyy) ಆಯಾ ಬಾಕ್ಸ್‌ಗಳಲ್ಲಿ ಕಡ್ಡಾಯವಾಗಿ ನಮೂದಿಸುವುದು.

- **ಅನುದಾನಿತ ಶಾಲೆಯ** ಶಿಕ್ಷಕರು ಅಂತರ ಆಡಳಿತ ಮಂಡಳಿಯ ವರ್ಗಾವಣೆ ಪಡೆದಿದ್ದರೆ ಮಾತ್ರ ಆಡಳಿತ ಮಂಡಳಿಯ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿಯ ಹೆಸರುಗಳನ್ನು ಮತ್ತು ಅವಧಿ(ಇಂದ ಮತ್ತು ವರೆಗೆ)ಯನ್ನು ಬರೆಯುವುದು.
- **ವಿದ್ಯಾರ್ಹತೆ:**
- **ಎಸ್ ಎಸ್ ಎಲ್ ಸಿ / 10 ನೇ ತರಗತಿಯಲ್ಲಿ** ವ್ಯಾಸಂಗ ಮಾಡಿದ ಮಾಧ್ಯಮದ ಸಂಕೇತವನ್ನು ಅನುಬಂಧದಿಂದ ಆಯ್ದು ಬರೆಯುವುದು.
- **ಎಸ್ ಎಸ್ ಎಲ್ ಸಿ / 10 ನೇ ತರಗತಿಯಲ್ಲಿ** ವ್ಯಾಸಂಗ ಮಾಡಿದ ಪ್ರಥಮ, ದ್ವಿತೀಯ ಮತ್ತು ತೃತೀಯ ಬಾಷೆಗಳ ಸಂಕೇತವನ್ನು ಅನುಬಂಧದಿಂದ ಆಯ್ಕೆ ಮಾಡಿ ಬರೆಯುವುದು.
- **ಪಿಯುಸಿ/ 12 ನೇ ತರಗತಿಯಲ್ಲಿ** ಅಭ್ಯಾಸ ಮಾಡಿರುವ ಬಾಷೆ-1 ಮತ್ತು ಬಾಷೆ-2 ಸಂಕೇತವನ್ನು ಅನುಬಂಧದಿಂದ ಆಯ್ಕೆ ಮಾಡಿ ಬರೆಯಿರಿ.
- **ಪ್ರಾಥಮಿಕ ಶಾಲೆಯ ಶಿಕ್ಷಕರು ಪಿಯುಸಿ/ 12 ನೇ ತರಗತಿಯಲ್ಲಿ** ಅಭ್ಯಾಸ ಮಾಡಿರುವ ಐಚ್ಛಿಕ ವಿಷಯಗಳು- 1,2,3,4 ನ್ನು ಅನುಬಂಧದಿಂದ ಆಯ್ಕೆ ಮಾಡಿ ಸಂಕೇತಗಳನ್ನು ಬರೆಯಿರಿ.
- **ಪದವಿಯನ್ನು ಆಯ್ಕೆ ಮಾಡಿ ಹಾಗೂ ಪದವಿಯಲ್ಲಿ** ವ್ಯಾಸಂಗ ಮಾಡಿದ ಬಾಷೆ-1 ಮತ್ತು ಬಾಷೆ-2 ಮತ್ತು ಐಚ್ಛಿಕ ವಿಷಯಗಳು- 1,2,3 ನ್ನು ಅನುಬಂಧದಿಂದ ಆಯ್ಕೆ ಮಾಡಿ ಸಂಕೇತಗಳನ್ನು ಬರೆಯಿರಿ.
- **ಭಾಷಾ ಶಿಕ್ಷಕರಾಗಿದ್ದಲ್ಲಿ/ ಭಾಷಾ ಕೋರ್ಸ್ ವ್ಯಾಸಂಗ ಮಾಡಿದ್ದಲ್ಲಿ** ಅನುಬಂಧದಲ್ಲಿರುವ ಭಾಷಾ ಕೋರ್ಸ್‌ನ ಸಂಕೇತವನ್ನು ಆಯ್ಕೆ ಮಾಡಿ ನಮೂದಿಸಿ.
- **ವ್ಯಾಸಂಗ** ಮಾಡಿರುವ **ವೃತ್ತಿಪರ ವಿದ್ಯಾರ್ಹತೆಯ** ಸಂಕೇತವನ್ನು ಆಯ್ಕೆ ಮಾಡಿ ಭರ್ತಿ ಮಾಡಿ.
- **ಪ್ರೌಢಶಾಲೆ ಶಿಕ್ಷಕರು** ಕಡ್ಡಾಯವಾಗಿ ಮತ್ತು **ಪ್ರಾಥಮಿಕ ಶಾಲೆಯ ಶಿಕ್ಷಕರು ಸಾಮಾನ್ಯ ವೃತ್ತಿಪರ ವಿದ್ಯಾರ್ಹತೆಯನ್ನು ವ್ಯಾಸಂಗ** ಮಾಡಿದ್ದರೆ, ಬೋಧನಾ ವಿಷಯ-1 ಮತ್ತು ಬೋಧನಾ ವಿಷಯ-2 ರ ಸಂಕೇತವನ್ನು ಅನುಬಂಧದಿಂದ ಆಯ್ಕೆ ಮಾಡಿ ಬರೆಯಿರಿ.
- **ಪ್ರೌಢಶಾಲೆ ಶಿಕ್ಷಕರು ವಿಶೇಷ ಶಿಕ್ಷಕರಾಗಿದ್ದಲ್ಲಿ ಅನುಬಂಧದಲ್ಲಿರುವ** ಸಂಬಂಧಿಸಿದ ಸಂಕೇತವನ್ನು ಯಾವ **ವಿಶೇಷ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರ ವಿದ್ಯಾರ್ಹತೆಯನ್ನು** ಆಯ್ಕೆ ಮಾಡಿ ಬರೆಯಿರಿ.
- **ಶಿಕ್ಷಕರು ವ್ಯಾಸಂಗ ಮಾಡಿರುವ ಸ್ನಾತಕೋತ್ತರ ಪದವಿಗಳನ್ನು ಅನುಬಂಧದಿಂದ** ಆಯ್ಕೆ ಮಾಡಿ ಸಂಕೇತಗಳನ್ನು ಬರೆಯಿರಿ.
- **ಪಿ ಹೆಚ್ ಡಿ** ಪದವಿ ಹೊಂದಿದ್ದರೆ ವಿಷಯವನ್ನು ಬರೆಯಿರಿ.
- ಯಾವುದೇ ಅನುಬಂಧದಲ್ಲಿ ಶಿಕ್ಷಕರಿಗೆ ಅನ್ವಯಿಸುವ ವಿಷಯಗಳು ಇಲ್ಲದಿದ್ದಲ್ಲಿ ಅಂತಹ ಮಾಹಿತಿಯನ್ನು ಇತರೆ ಮಾಹಿತಿಯನ್ನು ನಮೂದಿಸಿ ಬಾಕ್ಸ್‌ನಲ್ಲಿ ಬರೆಯುವುದು.
- **ಶಿಕ್ಷಕರು ಎಲ್ಲಾ** ಮಾಹಿತಿಗಳನ್ನು **ನಿಖರವಾಗಿ** ಭರ್ತಿ ಮಾಡಿ ಸಹಿ ಮಾಡುವುದು. ಹಾಗೂ **ಮುಖ್ಯ ಶಿಕ್ಷಕರು/ ಡಿ ಡಿ ಓ ಗಳು** ಶಿಕ್ಷಕರು ನಮೂನೆಗಳಲ್ಲಿ ನೀಡಿರುವ ಮಾಹಿತಿಯನ್ನು ಸೇವಾ ಪುಸ್ತಕದೊಂದಿಗೆ ಪರಿಶೀಲಿಸುವುದು.

.